## 2. ವುಹಾನ್: ಮತ್ತೆ ಕೊರೊನಾ ಸೋಂಕು ಭೀತಿ

ಚೀನಾದ ವುಹಾನ್ ಪ್ರಾಂತ್ಯದಲ್ಲಿ ಮತ್ತೆ ಕೊರೊನಾ ವೈರಸ್ ಸೋಂಕು ವ್ಯಾಪಿಸುವ ಭೀತಿ ಎದುರಾಗಿದೆ. ಪ್ರಾಂತ್ಯದ 742 ಜನರಲ್ಲಿ ಕೋವಿಡ್–19 ದೃಢಪಟ್ಟಿದೆ. ಆದರೆ ಇವರ ತಪಾಸಣೆ ನಡೆಸಿದ ವೇಳೆ ರೋಗದ ಗುಣಲಕ್ಷಣಗಳು ಕಂಡುಬರದೇ ಇರುವುದು ಆತಂಕಕ್ಕೆ ಕಾರಣವಾಗಿದೆ.

ಯಾವುದೇ ಲಕ್ಷಣಗಳು ಗೋಚರಿಸದೆ (ಅಸಿಂಮ್ಟೊವ್ಯಾಟಿಕ್) ಕೋವಿಡ್–19 ಪ್ರಕರಣಗಳ ಸಂಖ್ಯೆ ದಿನೇ ದಿನೇ ಏರಿಕೆಯಾಗುತ್ತಿರುವ ಕಾರಣದಿಂದ ನಿವಾಸಿಗಳಿಗೆ ಮನೆಯೊಳಗೆ ಇರಲು ಸೂಚಿಸಲಾಗಿದೆ. ಅನಗತ್ಯವಾಗಿ ಹೊರಗಡೆ ತಿರುಗಾಡದಂತೆ ಎಚ್ಚರಿಸಲಾಗಿದೆ. ಪ್ರಸ್ತುತ ಚೀನಾದಲ್ಲಿ ಒಟ್ಟು 1,075 ಜನರು ಈ ರೀತಿ ಗುಣಲಕ್ಷಣಗಳು ಗೋಚರಿಸದೆ ಕೋವಿಡ್–19ಗೆ ತುತ್ತಾಗಿದ್ದಾರೆ. ಈ ಕಾರಣದಿಂದ ಸೋಂಕು ಮೊದಲು ಪತ್ತೆಯಾದ ವುಹಾನ್‌ನಲ್ಲಿರುವ 1.1 ಕೋಟಿ ಜನರನ್ನು ಆರೋಗ್ಯ ಪರೀಕ್ಷೆಗೆ ಒಳಪಡಿಸಲು ಚೀನಾ ಸರ್ಕಾರ ಚಿಂತನೆ ನಡೆಸಿದೆ. ಒಂಭತ್ತು ವಾರ ಅವಧಿಯ ಲಾಕ್‌ಡೌನ್ ಅನ್ನು ಮಾರ್ಚ್ 25ಕ್ಕೆ ಹಿಂಪಡೆಯಲಾಗಿತ್ತು.

ಕೊರೊನಾ ವೈರಸ್ ಸೋಂಕಿನ ಕುರಿತು ಮೊಟ್ಟ ಮೊದಲು ಎಚ್ಚರಿಸಿದ್ದ ಡಾ.ಲಿ.ವೆನ್ ಲಿಯಾಂಗ್ ಹಾಗೂ ಸೋಂಕಿನಿಂದ ಮೃತಪಟ್ಟವರನ್ನು ಸ್ಮರಿಸಿ ಏಪ್ರಿಲ್ 4ರಂದು ದೇಶದಾದ್ಯಂತ ಶೋಕ ಆಚರಿಸಲು ಚೀನಾ ನಿರ್ಧರಿಸಿದೆ. ದೇಶದಲ್ಲಿರುವ ಎಲ್ಲ ಸರ್ಕಾರಿ ಕಛೇರಿಗಳಲ್ಲಿ, ವಿಶ್ವದಾದ್ಯಂತ ಇರುವ ಚೀನಾದ ರಾಯಭಾರಿ ಕಛೇರಿಗಳಲ್ಲಿ ರಾಷ್ಟ್ರ ಧ್ವಜವನ್ನು ಅರ್ಧಕ್ಕೆ ಇಳಿಸಲಾಗುವುದು ಎಂದು ತಿಳಿಸಿದೆ.

**ಭಾರತಕ್ಕೆ ನೆರವು:** ಕೊರೊನಾ ವೈರಸ್ ಸೋಂಕು ಪ್ರಸರಣ ತಡೆಯಲು ಭಾರತಕ್ಕೆ ರೂ.7,618ಕೋಟಿ (1 ಶತಕೋಟಿ ಡಾಲರ್) ತುರ್ತು ನೆರವು ನೀಡುವುದಕ್ಕೆ ವಿಶ್ವಬ್ಯಾಂಕ್ ಅನುಮೋದನೆ ನೀಡಿದೆ.

ಆಧಾರ:ಪ್ರಜಾವಾಣಿ, ದಿನಾಂಕ: 04.04.2020